ಸಂಸ್ಥೆಗಳಿಗೆ ಸುಮಾರು 23 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅದಾದ ಮೇಲೆ ಶಿಕ್ಷಕರುಗಳೆಲ್ಲಾ ಧರಣಿ ಮಾಡಿದರು, ಸತ್ಯಾಗ್ರಹ ಮಾಡಿದರು, ನಮ್ಮ ಪ್ರೌಢ ಶಾಲಾ ಶಿಕ್ಷಣ ಮಂತ್ರಿಗಳು, ಬಹುಶಃ ಮಾನ್ಯ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಎಂದು ನಾನು ಅಂದುಕೊಂಡಿದ್ದೇನೆ, ಒಂದು ಸಭೆಯನ್ನು ಕರೆಸಿದರು, ಯಾರ್ಯಾರು ಏಜೆನ್ಸಿಗಳನ್ನು ತೆಗೆದುಕೊಂಡಿದ್ದಾರೆ ಆ ಮೂರು ಜನ, ಮತ್ತು ಆ ಶಿಕ್ಷಕರುಗಳ ಸಂಘದ ಪ್ರತಿನಿಧಿಗಳನ್ನು ಕರೆಸಿ ಒಂದು ಸಭೆಯನ್ನೂ ಸಹ ಮಾಡಿದರು. ಆ ಸಭೆಯಲ್ಲೂ ಸಹ, ಇಷ್ಟು ಹಣವನ್ನು ನೀವು ತಕ್ಷಣ ಬಿಡುಗಡೆ ಮಾಡಬೇಕೆಂದು ಹೇಳಿ ಒಂದು ಅಗ್ರಿಮೆಂಟ್ ಆಯಿತು. ಈ ಸಂಸ್ಥೆಗಳು ಸರ್ಕಾರದಿಂದ ಹಣವನ್ನು ತೆಗೆದುಕೊಂಡಿದ್ದಾರೆ. ಆದರೆ ಶಿಕ್ಷಕರುಗಳಿಗೆ ಸಂಬಳ ಕೊಡುತ್ತಿಲ್ಲ. ಇವತ್ತು ಆ ಶಾಲೆಗಳಲ್ಲಿ ಏನು ಮಾಡಬೇಕು ಎಂಬುದು ಅವರಿಗೆ ಗೊತ್ತಾಗುತ್ತಿಲ್ಲ. ದಯಮಾಡಿ ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಪ್ರೌಢ ಶಾಲಾ ಶಿಕ್ಷಣ ಮಂತ್ರಿಗಳು ಸದನದಲ್ಲಿಲ್ಲ, ನಾನು ಕೇಳುವುದು ಇಷ್ಟೆ. ಮಾನ್ಯ ಮುಖ್ಯಮಂತ್ರಿಗಳು ಅಥವಾ ಸಂಬಂಧಪಟ್ಟಂತಹ ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ಮಧ್ಯೆ ಪ್ರವೇಶ ಮಾಡಬೇಕು. ಆ ಶಿಕ್ಷಕರುಗಳಿಗೆ ಅಗ್ರಿಮೆಂಟ್ ಪ್ರಕಾರ ಮಿನಿಮಮ್ ಸ್ಯಾಲರಿಯನ್ನು ಕೊಡಬೇಕು. ಅವರು ಏನೇನನ್ನೋ ಬೇಕಾದಷ್ಟು ಬೇಡಿಕೆಗಳನ್ನು ಇಡುತ್ತಾರೆ. ಅದನ್ನೆಲ್ಲಾ ಮಾನ್ಯ ಮಾಡಬೇಕೆಂದು ನಾನು ಹೇಳುವುದಿಲ್ಲ. ಆದರೆ ಕನಿಷ್ಟ ಪಕ್ಷ ಅವರಿಗೆ ನೀವು ಏನು ಅಗ್ರಿಮೆಂಟ್ ಪ್ರಕಾರ ಸಂಬಳ ಕೊಡಬೇಕೆಂದು ಹೇಳಿದ್ದೀರೋ, ಅದನ್ನು ಕೊಡಬೇಕು. ಇದಕ್ಕಾಗಿ ಕಳೆದ ವರ್ಷ ಸರ್ಕಾರಿ ಖಜಾನೆಯಿಂದ 23–30 ಕೋಟಿ ರೂಪಾಯಿಗಳು, ಅದರ ಹಿಂದೆ ಸುಮಾರು 30 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ನನಗೆ ಗೊತ್ತಿರುವಂತೆ ಒಟ್ಟಾರೆಯಾಗಿ ಸುಮಾರು 60–70 ಕೋಟಿ ರೂಪಾಯಿಗಳು ಇದಕ್ಕಾಗಿ ಬಿಡುಗಡೆಯಾಗಿದೆ. ಆ ಬಿಡುಗಡೆಯಾಗಿರುವ ಹಣದಲ್ಲಿ, ಆ ಕಂಪೆನಿಗಳು ಬಾಗಿಲು ಹಾಕಿಕೊಂಡು ಹೋಗುವುದಕ್ಕೆ ಮುಂಚೆ, ಆ ಶಿಕ್ಷಕರುಗಳಿಗೆ ಸಂಬಳ ಕೊಡುವಂತೆಯಾದರೂ ಮಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮತ್ತೆ ಹೊಸದಾಗಿ ಈ ರೀತಿ ಮಾಡಲಿಕ್ಕೆ ಅವಕಾಶ ಮಾಡಿಕೊಡಬಾರದು ಎಂದೂ ಸಹ ಕೋರುತ್ತೇನೆ.

ಋ) ಯಲ್ಲಾಪುರ ತಾಲ್ಲೂಕು ಹಾಗೂ ಸುತ್ತಮುತ್ತ ಭೂಕಂಪ ಮತ್ತು ಭೂ ಕುಸಿತ ಉಂಟಾಗಿ ಜನರು ಭಯಭೀತರಾಗಿರುವ ಬಗ್ಗೆ

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೇ, ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ನಿನ್ನೆಯಲ್ಲ, ಮೊನ್ನೆ ರಾತ್ರಿ ಭೂಕಂಪ ಆಗಿದೆ ಮತ್ತು ಕಳೆದ ಹದಿನೈದು ದಿನಗಳ ಹಿಂದೆ ಭೂ ಕುಸಿತ ಆಗಿದೆ. ಈ ವಿಷಯದ ಕುರಿತಂತೆ ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಬಯಸುತ್ತೇನೆ. ಪ್ರಾರಂಭದಲ್ಲೇ ಸರ್ಕಾರಕ್ಕೆ ನನ್ನದೊಂದು ವಿನಂತಿ ಏನೆಂದರೆ, ಇದೊಂದು ಗಂಭೀರವಾದಂತಹ ವಿಷಯವಾಗಿರುವುದರಿಂದ, ಇಡೀ ಜಿಲ್ಲೆಯ ಜನ ಅಲ್ಲಿ ಭಯಭೀತರಾಗಿದ್ದಾರೆ. ಆತಂಕಗೊಂಡಿದ್ದಾರೆ, ನಮ್ಮ ನಾಳಿನ ಭವಿಷ್ಯ ಏನು ಎಂಬುದರ ಬಗ್ಗೆ ಚಿಂತಿತರಾಗಿದ್ದಾರೆ, ಆ ಹಿನ್ನೆಲೆಯಲ್ಲಿ ಸರ್ಕಾರ ಇದಕ್ಕೆ ಉತ್ತರ ಹೇಳುತ್ತದೆ ಎನ್ನುವಂತಹ ಭರವಸೆ ಇದೆ, ಮಾನ್ಯ ಅಧ್ಯಕ್ಷರೂ ಕೂಡ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಒಂದು ಆಯ್ಕೆಯಾದರತಹ ಸರ್ಕಾರದ ಅತ್ಯಂತ ಪ್ರಾಮುಖ್ಯವಾದಂತಹ ಸಂವಿಧಾನ ಬದ್ಧವಾದಂತಹ

ಜವಾಬ್ದಾರಿ ಏನೆಂದರೆ, ಜನರ ಆಸ್ತಿ–ಪಾಸ್ತಿಗಳನ್ನು ಮತ್ತು ಜೀವವನ್ನು ರಕ್ಷಣೆ ಮಾಡುವುದು. ಹಾಗಾಗಿ ಈಗ ನಮ್ಮ ಜಿಲ್ಲೆಯಲ್ಲಿ ಕಳೆದ 15 ದಿನಗಳ ಹಿಂದೆ ಅಂದರೆ ಕಳೆದ ತಿಂಗಳು 21–22ನೇ ತಾರೀಖಿನ ದಿನ ಯಲ್ಲಾಪುರ ತಾಲ್ಲೂಕಿನ ಅರಬೈಲ್‌ಘಾಟ್‌ನ ಸುಮಾರು 50 ಹೆಕ್ಟೇರ್‌ನಷ್ಟು ಭೂಮಿ, ಅಲ್ಲಿಯ ಘಟ್ಟ ಪ್ರದೇಶ, ಅದು ಕುಸಿತ ಆಗಿ ಹೋಯಿತು. ಬಹಳ ದೊಡ್ಡ ಗಂಭೀರವಾದಂತಹ ಸಮಸ್ಯೆ ಅದು. ಏಕೆ ಕುಸಿತವಾಯಿತು ಎನ್ನುವಂತಾದ್ದು ನಮ್ಮ ಜಿಲ್ಲೆಯ ಜನತೆಗೆ ಆಶ್ಚರ್ಯವಾಗಿದೆ. ಮಲೆನಾಡಿನಲ್ಲಿ ಆಗಾಗ ಮಳೆ ಬರುವುದರಿಂದ ಈ ನಮೂನೆಯ ಭೂ ಕುಸಿತ ಆಗುತ್ತಿರುತ್ತದೆ ಎಂದು ಮಾನ್ಯ ಚಂದ್ರೇಗೌಡರಿಗೆ ಅನಿಸಬಹುದು. ಆ ರೀತಿಯ ಮಲೆನಾಡಿನಲ್ಲಿ ಆಗುವಂತಹ ಭೂ ಕುಸಿತ ಸಹಜವಾಗಿದೆ. ಸಹಜವಾದಂತಹ ಭೂ ಕುಸಿತ ಇದು ಎಂದು ನಾವು ಭಾವಿಸಿಕೊಳ್ಳುವುದಿಲ್ಲ. ಏಕೆಂದರೆ, ಆ ರೀತಿಯ ಭೂ ಕುಸಿತವನ್ನು ನಾವು ನೋಡಿದ್ದೇವೆ. ಕೊಂಕಣ ರೈಲ್ವೆಯಲ್ಲಿ ಭೂ ಕುಸಿತವಾಯಿತು, ಇನ್ಯಾವುದೋ ರಸ್ತೆಗಳೆಲ್ಲಾ ಕಟ್ ಆಗಿ ಭೂ ಕುಸಿತವುಂಟಾಗಿದೆ ಎಂದು ನಾವು ಕೇಳಿದ್ದೇವೆ. ಅದೆಲ್ಲಾ ಸಹಜವಾಗಿ ಮಳೆ ಜಾಸ್ತಿಯಾದಾಗ ಆಗುತ್ತಿರುತ್ತದೆ. ಆದರೆ 50 ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ಭೂ ಕುಸಿತ ಆಗಿರುವಂತಾದ್ದು, ನಮ್ಮೆಲ್ಲರಲ್ಲೂ ಆತಂಕ ಉಂಟು ಮಾಡಿದೆ. ಇದು ಅತಿ ಮಳೆಯಿಂದಾಗಿ ಸಹಜವಾಗಿ ಆಗಿರುವಂತಹ ಭೂ ಕುಸಿತವಲ್ಲ ಎನ್ನುವಂತಹ ಭಾವನೆ ನಮ್ಮ ಜಿಲ್ಲೆಯ ಜನತೆಯಲ್ಲಿ ಮೂಡಿದೆ. 15 ದಿನಗಳ ಹಿಂದೆ ಆದ ಈ ಭೂ ಕುಸಿತ ಒಂದು ಭಾಗವಾಯಿತು. ಮೊನ್ನೆ ರಾತ್ರಿ ಸುಮಾರು ಏಳೂ ಕಾಲು ಗಂಟೆಯ ಹೊತ್ತಿಗೆ ಭೂಕಂಪವಾಯಿತು. ರಿಕ್ಟರ್ ಮಾಪನದಲ್ಲಿ 4 ಎಂದು ಅದರ ಅಳತೆಯನ್ನು ಮಾಡಿದ್ದಾರೆ. ಅದು ಸಮುದ್ರದಲ್ಲಿ ಕೇಂದ್ರೀಕೃತವಾಗಿತ್ತು ಎಂದು ಗೊತ್ತಾಗಿದೆ. ಈ ಭೂಕಂಪದಿಂದ ಮತ್ತಷ್ಟು ಜನ ಭಯಭೀತರಾಗಿದ್ದಾರೆ. ಆ ಯಲ್ಲಾಪುರ ತಾಲ್ಲೂಕಿನಲ್ಲಿ ನಿನ್ನೆ ನಾನು ಇದ್ದೆ. ನನ್ನ ಕ್ಷೇತ್ರದ ಅರ್ಧ ಭಾಗ ಅದು ಬರುತ್ತದೆ. ಯಲ್ಲಾಪುರ ತಾಲ್ಲೂಕು, ಕಾರವಾರ, ಜೊಯಿಡಾ, ಹಳಿಯಾಳ ತಾಲ್ಲೂಕಿನ ದಾಂಡೇಲಿ ಭಾಗಗಳಲ್ಲಿ ಈ ಭೂಕಂಪದ ಪ್ರಮಾಣ ಹೆಚ್ಚಾಗಿ ಜನ ಇನ್ನಷ್ಟು ಭಯಭೀತರಾಗಿದ್ದಾರೆ. ನಾನು ಏಕೆ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆಂದರೆ, ಅಲ್ಲಿ ಐದು ಡ್ಯಾಮ್ ಇದೆ. ಈ ಕಾಳಿ ಕಣಿವೆ ಪ್ರದೇಶದಲ್ಲಿ ಸೂಪಾ ಇದೆ, ನಾಗಝರಿ ಇದೆ. ಅದೇ ರೀತಿ ತಟ್ಟಿಹಳ್ಳ ಇದೆ, ಕೊಡಸಳ್ಳಿ ಇದೆ, ಕದ್ರಾ ಡ್ಯಾಮ್ ಇದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನದೊಂದು ವಿನಂತಿ ಏನೆಂದರೆ, ಈ ಐದು ಡ್ಯಾಮ್‌ಗಳ ನಿರ್ಮಾಣದಿಂದ ಪರಿಸರದಲ್ಲಿ ಅಸಮತೋಲನಗಳು ಆಗಿವೆ, ಆ ಕಾರಣದಿಂದ ಇಲ್ಲಿ ಭೂಕಂಪಗಳು ಮತ್ತು ಭೂ ಕುಸಿತಗಳು ಆಗುತ್ತಿವೆ ಎನ್ನುವಂತಹ ಭಾವನೆ ನಮ್ಮ ಜನತೆಯಲ್ಲಿ ಬಂದಿದೆ. ಅಲ್ಲದೆ ಇದು ಬಹಳ ಸೂಕ್ಷ್ಮವಾದಂತಹ ಪ್ರದೇಶ ಸಹಾ ಆಗಿದೆ. ಇಲ್ಲಿ ಕೈಗಾ ಇದೆ. ಏನಾದರೂ ಆಕಸ್ಮಿಕವಾಗಿ ಭೂಕಂಪದಿಂದ ಹೆಚ್ಚು ಕಡಿಮೆಯಾದರೆ, ಕೈಗಾದಲ್ಲಿ ಅನಾಹುತ ಆದರೆ, ಎಂತಹ ಒಂದು ಭಯಂಕರವಾದ ಪರಿಸ್ಥಿತಿ ನಿರ್ಮಾಣವಾದೀತು ಎಂಬುದನ್ನು ನಾವು ಊಹಿಸಬಹುದಾಗಿದೆ. ಹಾಗಾಗಿ ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ. ನಿಜವಾಗಿ ಜನ ಅಲ್ಲಿ ಬಹಳ ಆತಂಕಗೊಂಡಿದ್ದಾರೆ, ಕಳವಳಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಎರಡು ಪ್ರಮುಖವಾದಂತಹ ಅಂಶಗಳನ್ನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಒಂದು ತಜ್ಞರ ತಂಡವನ್ನು ತಕ್ಷಣ ನಮ್ಮ ಜಿಲ್ಲೆಗೆ ಕಳುಹಿಸಿ, ಈ ಅನಾಹುತಗಳಿಗೆ ಕಾರಣವೇನು ಎನ್ನುವುದರ ಬಗ್ಗೆ ಒಂದು ವೈಜ್ಞಾನಿಕವಾದಂತಹ ಅಧ್ಯಯನವನ್ನು ಮಾಡಿಸಬೇಕು. ತಕ್ಷಣದಲ್ಲಿ ಈ

ಕೆಲಸವಾದರೆ, ಜನತೆಗೊಂದು ಭರವಸೆ ಬರುತ್ತದೆ, ವಿಶ್ವಾಸ ಬರುತ್ತದೆ. ಇದು ಮೊದಲು ಆಗಬೇಕು. ಎರಡನೆಯದಾಗಿ, ಹೊಸದಾಗಿ ಇನ್ನು ಯಾವುದಾದರೂ ಯೋಜನೆಯನ್ನು ಅಲ್ಲಿ ಜಾರಿಗೊಳಿಸುವುದಕ್ಕಿಂತ ಮೊದಲು, ಉತ್ತರ ಕನ್ನಡ ಜಿಲ್ಲೆಯ ಧಾರಣ ಸಾಮರ್ಥ್ಯದ ಬಗ್ಗೆ ಅಧ್ಯಯನ ಆಗಲೇಬೇಕು. ನಾನೇಕೆ ಇದನ್ನು ಉಲ್ಲೇಖ ಮಾಡುತ್ತಿದ್ದೇನೆ ಎಂದರೆ, ಈಗ ಇನ್ನಷ್ಟು ಡ್ಯಾಮ್‌ಗಳನ್ನು ಕಟ್ಟುವ ಬಗ್ಗೆ, ನದಿಯನ್ನು ತಿರುಗಿಸುವ ಯೋಜನೆಗಳ ನೀಲಿ ನಕ್ಷೆಗಳು ಸಿದ್ಧವಾಗಿವೆ. ಅದೆಲ್ಲವನ್ನೂ ಸಹ ಅಲ್ಲಿ ಅನುಷ್ಠಾನಗೊಳಿಸುವುದಕ್ಕಿಂತ ಮೊದಲು ಉತ್ತರ ಕನ್ನಡ ಜಿಲ್ಲೆಯ ಧಾರಣ ಸಾಮರ್ಥ್ಯದ ಬಗ್ಗೆ ಇನ್ನಷ್ಟು ಹೆಚ್ಚು ಅಧ್ಯಯನ ಆಗಬೇಕಾದಂತಹ ಅಗತ್ಯತೆ ಇದೆ, ಆ ಹಿನ್ನೆಲೆಯಲ್ಲಿ ನಾನು ಈ ಎರಡು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಿದ್ದೇನೆ. ಮೊದಲನೆಯದಾಗಿ, ತಜ್ಞರ ತಂಡವೊಂದನ್ನು ತಕ್ಷಣವೇ ಅಲ್ಲಿಗೆ ಕಳುಹಿಸಿಕೊಟ್ಟು, ಭೂಕಂಪ ಮತ್ತು ಭೂಕುಸಿತದಿಂದಾಗಿ ಭಯಭೀತರಾಗಿರುವ ಜನರಲ್ಲಿ ಸರ್ಕಾರ ವಿಶ್ವಾಸ ಮೂಡಿಸುವ ರೀತಿಯಲ್ಲಿ ಇದರ ಬಗ್ಗೆ ಅಧ್ಯಯನ ನಡೆಸಬೇಕು.

1.10 ಪಿಎಂ

ತಕ್ಷಣ ಇದರ ಬಗ್ಗೆ ಪರಿಹಾರ ಕೊಡುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ, ಮುಂಜಾಗ್ರತೆ ಸೂಚನೆ ಕೊಡುತ್ತೇವೆ, ಮತ್ತು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆ ಮಾತುಗಳು ಈ ಸದನದ ಮೂಲಕ ಹೋಗುವ ಅಗತ್ಯ ಇದೆ. ಈ ಅಧ್ಯಯನ ಆಗುವವರೆಗೆ ಅಲ್ಲಿ ಯಾವುದೇ ಹೊಸ ಯೋಜನೆಗಳನ್ನು ತರಬಾರದು ಎಂದು, ಆ ರೀತಿ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು ಎನ್ನುವ ಮಾತು ಹೇಳಿ, ಅಲ್ಲಿ ಪರಿಹಾರ ಕೆಲಸಗಳು ಆಗಬೇಕಾಗಿದೆ. ಭೂ ಕುಸಿತದಿಂದ ಮನೆ ಹಾಳಾಗಿದೆ, ಅವರ ಕೃಷಿ ಭೂಮಿ ಹಾಳಾಗಿದೆ, ಕೆರೆಗಳು ಹಾಳಾಗಿವೆ, ಆ ಎಲ್ಲಾ ವಿಷಯಗಳಿಗೆ ಸರ್ಕಾರ ಪರಿಹಾರ ದೊರಕಿಸಿಕೊಡಬೇಕಾಗಿದೆ. ಅದಕ್ಕಿಂತ ಮುಖ್ಯವಾಗಿ ಭೂ ಕುಸಿತ ಮತ್ತು ಭೂಕಂಪದಿಂದ ಜನ ಭಯಭೀತವಾಗಿರುವ ಬಗ್ಗೆ ಸರ್ಕಾರ ಸ್ಪಂದಿಸಿ ಅವರು ತಮ್ಮ ಉತ್ತರ ಹೇಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಟಿವಿಯಲ್ಲಿ ನ್ಯೂಸ್ ಕೇಳಿದ ತಕ್ಷಣ ಎಸ್‌ಪಿ ಮತ್ತು ಡಿಸಿಗಳಿಗೆ ಕಾಂಟ್ಯಾಕ್ಟ್ ಮಾಡಿದೆ. ಅದೇ ರೀತಿ ಆ ಜಿಲ್ಲೆಯ ಉಸ್ತುವಾರಿ ಮಂತ್ರಿಗಳನ್ನು ಸಹ ನಾನು ಭೇಟಿ ಮಾಡಿ ಹೇಳಿದೆ. ಅವರು ಸ್ಥಳಕ್ಕೆ ಭೇಟಿ ನೀಡಿ, ಶಿವಮೊಗ್ಗದಿಂದ ಯಲ್ಲಾಪುರಕ್ಕೆ ಹೋಗಿ ಪರಿಸ್ಥಿತಿ ನೋಡಿಕೊಂಡು ಬಂದು ವಿವರವನ್ನು ತಿಳಿಸುತ್ತೇವೆಂದು ಹೇಳಿದ್ದಾರೆ. ಎರಡನೆಯದಾಗಿ ಕಳವಳ ಮತ್ತು ಆತಂಕ ಪಡುವ ಅವಶ್ಯಕತೆ ಇಲ್ಲ. 3.2 ರ ರೆಕ್ಟಾರ್‌ನಲ್ಲಿ ಭೂಕಂಪ ಆಗಿದೆ. ಯಾವುದೇ ಹಾನಿ ಅದರಿಂದ ಆಗಿಲ್ಲ – ಎನ್ನುವ ಮಾಹಿತಿಯನ್ನು ಜಿಲ್ಲಾಧಿಕಾರಿಗಳು ನನಗೆ ಕೊಟ್ಟಿದ್ದಾರೆ. ಎಕ್ಸ್‌ಪರ್ಟ್ಸ್ ಕಳುಹಿಸಿ ಉಳಿದ ಮಾಹಿತಿ ಪಡೆದುಕೊಳ್ಳಬೇಕು ಮತ್ತು ಮುಂದೆ ಜನರಿಗೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂಬ ಸಲಹೆಯನ್ನು ತಾವು ಕೊಟ್ಟಿದ್ದೀರಿ, ಖಂಡಿತವಾಗಿ ಡಿಸ್ಟ್ರಿಕ್ಟ್ ಇನ್‌ಛಾರ್ಜ್ ಮಿನಿಸ್ಟರ್ ಬಂದ ಮೇಲೆ ಅವರು ತಂದ ವರದಿ ಮತ್ತು ತಾವು ಹೇಳಿದ ಸಲಹೆ ಇವೆರಡನ್ನೂ ಗಣನೆಗೆ ತೆಗೆದುಕೊಂಡು ಮುಂದಿನ ಕ್ರಮ ಜರುಗಿಸುತ್ತೇವೆ.